**<u>ಪಿಡಬ್ಲೂ-1</u>**

**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 13-12-2023.</u>**

**ಮುಂದುವೆರದ ಮುಖ್ಯ ವಿಚಾರಣೆಃ ಶ್ರೀ ಎ ಆರ್ ಎಸ್ ವಾದಿ ಪರ ವಕೀಲರಿಂದ**

1. ಈ ದಿನ ನಾನು ದೇವನಹಳ್ಳಿ ತಾಲ್ಲೂಕು, ಬಾಗಲೂರು ಗ್ರಾಮದ ಸರ್ವೆ ನಂ. 404 ಕ್ಕೆ ಸಂಬಂದಿಸಿದ ಅಸಲು ಮಂಜೂರಾತಿ ಪ್ರಮಾಣ ಪತ್ರವನ್ನು (ಗ್ರಾಂಟ್ ಸರ್ಟಿಪಿಕೇಟ್) ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-20 ಎಂದು ಗುರುತಿಸಲಾಯಿತು.

2. ದೇವನಹಳ್ಳಿ ತಾಲ್ಲೂಕು, ಬಾಗಲೂರು ಗ್ರಾಮದ ಸರ್ವೆ ನಂ. 404 ಕ್ಕೆ ಸಂಬಂದಿಸಿದ ಒಂದು ಅಸಲು ಮಹಜರನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-21 ಎಂದು ಗುರುತಿಸಲಾಯಿತು.

3. ದೇವನಹಳ್ಳಿ ತಾಲ್ಲೂಕು, ಬಾಗಲೂರು ಗ್ರಾಮದ ಸರ್ವೆ ನಂ. 404 ಕ್ಕೆ ಸಂಬಂದಿಸಿದ ಸಯ್ಯದ್ ಪಾಷ ರವರ ಹೇಳಿಕೆಯ ಅಸಲು ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-22 ಎಂದು ಗುರುತಿಸಲಾಯಿತು.

4. ದಾವಾ ಆಸ್ತಿಗೆ ಸಂಬಂದಿಸಿದ ಮೂರು ಕಂದಾಯ ಪಾವತಿ ರಸೀದಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-23 ರಿಂದ 25 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪ್ರತಿವಾದಿಯರು ಪ್ರತಿವಾದಪತ್ರವನ್ನು ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,
ದೇವನಹಳ್ಳಿ.